1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ

ಓ ಎಸ್ 48/2019

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ದಿನಾಂಕಃ 16.02.2026** **ಡಿ ಡಬ್ಲ್ಯೂ 1**

**ಪಾಟೀ ಸವಾಲುಃ** ವಾದಿ ಪರ ಶ್ರೀ ಬಿ ಎಸ್ ವಕೀಲರಿಂದಃ

ನಾನು 2 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಗೌಡ್ರ ನಂಜುಂಡಪ್ಪ ನನ್ನ ತಂದೆ. ನನ್ನ ತಂದೆಗೆ 6 ಜನ ಅಣ್ಣ ತಮ್ಮಂದಿರು. ಅವರೆಂದರೆ ಬಸಪ್ಪ, ನಂಜುಂಡಪ್ಪ, ಮರುಳಪ್ಪ, ಮಲ್ಲಪ್ಪ , ಕೊಟ್ರಪ್ಪ ಮತ್ತು ರೇವಣಪ್ಪ. ಸದರಿಯವರೆಲ್ಲರೂ ಆಸ್ತಿಯಲ್ಲಿ ಪಾಲು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. ಸದರಿ ಪಾಲು ವಿಭಾಗದಲ್ಲಿ ನನ್ನ ತಂದೆಗೆ ಹರಿಹರ ತಾಲೂಕಿನ ಶೇರಾಪುರ ಗ್ರಾಮದ ಸರ್ವೆ ನಂ. 18/1 ರಲ್ಲಿ 3 ಎಕರೆ ಜಮೀನು ಬಂದಿರುತ್ತದೆ. ನನ್ನ ತಂದೆ ಬದುಕಿದ್ದಾಗ ನಮ್ಮ ಕುಟುಂಬದ ಜವಾಬ್ದಾರಿಯನ್ನು ಅವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಸದರಿ 3 ಎಕರೆ ಜಮೀನು ನನ್ನ ತಂದೆಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿ ಎಂದರೆ ಸರಿ. ನನ್ನ ತಂದೆ ಬದುಕಿದ್ದಾಗ ನಮ್ಮ ಕುಟುಂಬದ ಕೆಲವು ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿ. ಶೇರಾಪುರ ಗ್ರಾಮದ ಸರ್ವೆ ನಂ. 18/1 ರಲ್ಲಿ ಎಷ್ಟು ಜಮೀನನ್ನು ನನ್ನ ತಂದೆ ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

ವಾದಿಯ ಪರಿಚಯ ನನಗೆ ಇಲ್ಲ. ವಾದಿ ಏನು ದಾವಾ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ವಾದಿ ಯಾರು ಯಾರ ನಡುವೆ ಯಾವ ಕಾರಣಕ್ಕಾಗಿ ದಾವೆ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ವಾದಿ ಯಾವ ಯಾವ ದಾಖಲೆಗಳನ್ನು ಸಲ್ಲಿಸಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ. ನನ್ನ ತಕರಾರಿನಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ನನ್ನ ಹಾಗೂ ನನ್ನ ಮಕ್ಕಳ ಪರವಾಗಿ ತಕರಾರು ಸಲ್ಲಿಸಿದ್ದೇನೆ.

ನನಗೆ 73 ವರ್ಷ ವಯಸ್ಸು. ನನ್ನ ತಂದೆ 1984 ನೇ ಇಸ್ವಿಯಲ್ಲಿ ಮಾಡಿದ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ತಂದೆ ಯಾವ ಯಾವ ಆಸ್ತಿಗಳನ್ನು ಯಾರಿಗೆ ಬರೆದುಕೊಟ್ಟಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ಸರ್ವೆ ನಂ. 18/1, 1984 ರಲ್ಲಿಯೂ ಸಹ ಪಹಣಿಯಲ್ಲಿ ಇತ್ತು ಎಂದರೆ ಸರಿ. ನನ್ನ ತಂದೆ ತೀರಿಕೊಂಡ ನಂತರ ಸರ್ವೆ ನಂ. 18/1 ನ್ನು ಅಲಿನೇಶನ್ (ಎನ್ ಎ) ಮಾಡಲು ಕೊಟ್ಟಿದ್ದೇನೆ ಅದು ಇನ್ನು ಆಗಿ ಬಂದಿಲ್ಲ. ಸರ್ವೆ ನಂ. 18/1 ಎಷ್ಟು ಸೈಟುಗಳನ್ನು ಮಾಡಿದ್ದೀರಾ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಆದರೆ 11 ನೇ ಸೈಟ ನನಗೆ ಬಂದಿದೆ ಎಂದು ನುಡಿಯುತ್ತಾರೆ. ಸದರಿ 11 ನೇ ಸೈಟು ನಿಮಗೆ ಹೇಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ಪಿತ್ರಾರ್ಜಿತವಾಗಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ಉಳಿದ ಸೈಟುಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ಹೆಸರಿಗೆ ಬೇರೆ ಯಾವುದೇ ಸೈಟು ಇಲ್ಲ. ನಾನು ಚಾಸಾ.5 ಮತ್ತು 6 ರವರಿಗೆ ಸೈಟ ನಂಬರ್ 11 ನ್ನು ಮಾರಾಟ ಮಾಡಿರುತ್ತೇನೆ. ಸದರಿ ಸೈಟನ ಚೆಕ ಬಂದಿಯನ್ನು ನನಗೆ ಹೇಳಲು ಬರುವುದಿಲ್ಲ. ನಾನು ಚಾಸಾ.5 ಮತ್ತು 6 ರವರಿಗೆ ಮಾರಾಟ ಮಾಡಿದ ಕ್ರಯಪತ್ರದಲ್ಲಿ ಕ್ರಯದ ಶೆಡ್ಯೂಲ್ ಆಸ್ತಿ ಹೇಗೆ ಬಂದಿರುತ್ತದೆ ಎಂದು ಸದರಿ ದಾಖಲೆಯಲ್ಲಿ

ಉಲ್ಲೇಖ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 18/1 ರಲ್ಲಿ ಎಷ್ಟು ಮನೆಗಳು ಇವೆ ಎಂದು ನಾನು ಎಣಿಸಿಲ್ಲ. ಸುಮಾರು 4 ಸಾಲು ಮನೆಗಳು ಇವೆ ಎಂದು ನುಡಿಯುತ್ತಾರೆ. ನಾನು ಪ್ರತಿವಾದಿ 5 ಮತ್ತು 6 ರವರಿಗೆ ಖಾಲಿ ಜಾಗ ಮಾರಾಟ ಮಾಡಿದ್ದೇನೆ. ಸಾಕ್ಷಿಯು ಮುಂದುವರೆದು ನಾನು ಕ್ರಯಕ್ಕೆ ನೀಡಿದ ನಂತರ ಮನೆ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನನಗೆ ಬಂದ ಸೈಟ ನಂಬರ್ 11 ರಲ್ಲಿ 2 ಭಾಗ ಮಾಡಿರುತ್ತಾರೆ.

ದಿಃ 12.12.1984 ರಂದು ದಾವಾ ಆಸ್ತಿಗೆ ಸಂಬಂದಿಸಿದಂತೆ ನನ್ನ ತಂದೆ ವಾದಿಗೆ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯದ ಕರಾರು ಪತ್ರದಲ್ಲಿ ಸೈಟ ನಂಬರ 11 ರ 30 X 40 ಅಡಿ ಇದ್ದು ಸದರಿ ಜಾಗದ ಪೈಕಿ 15 X 40 ಅಡಿ ಜಾಗಕ್ಕೆ ಕ್ರಯದ ಕರಾರು ಪತ್ರವನ್ನು ಮಾಡಿಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಕಾಲಕ್ಕೆ ಆಸ್ತಿಯ ಒಟ್ಟು ಮೊತ್ತ 900 ರೂ ಎಂದು ನನ್ನ ತಂದೆ ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದೇ ದಿನ ನನ್ನ ತಂದೆ ಸದರಿ ಆಸ್ತಿಯನ್ನು ವಾದಿಯ ಸ್ವಾಧೀನಕ್ಕೆ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯದ ಕರಾರಿನ ಪ್ರಕಾರ ವಾದಿಯಾಗಲಿ ವಾದಿ ಸದರಿ ಜಾಗದಲ್ಲಿ ಮನೆ ಕಟಿಸಿಕೊಂಡು ಇರಬೇಕು ಎಂದು ನನ್ನ ತಂದೆ ಒಪ್ಪಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅಲ್ಲಿ ಯಾರು ಇರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನು ತುಂಡು ಜಮೀನು ಆಗಿದ್ದರಿಂದ ಕ್ರಯವಾಗದ ಕಾರಣ ಅದನ್ನು ಅಂತಹ ಕಾನೂನು ತೆರುವಾದ ನಂತರ ಮಾಡಿಕೊಡುವುದಾಗಿ ಒಪ್ಪಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯದ ಕರಾರು ಪತ್ರಕ್ಕೆ ನನ್ನ ತಂದೆ ಹಾಗೂ ಸಾಕ್ಷಿಯಾಗಿ ಜಿ ಮಲ್ಲೇಶಪ್ಪ ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲಾ ವಿಚಾರ ನನಗೆ ತಿಳಿದಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸುವ ಕಾಲದವರೆಗೂ ವಾದಿಯೇ ದಾವಾ ಆಸ್ತಿಯಲ್ಲಿ ಸಿಮೆಂಟ್ ಶೀಟನ್ನು ಹಾಕಿಕೊಂಡು ದನಕರುಗಳನ್ನು ಕಟ್ಟಿಕೊಂಡು ಇದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಳ್ಳುವ ಪೂರ್ವದಲ್ಲಿ ವಾದಿ ನನ್ನ ತಂದೆಯನ್ನು ಸಾಕಷ್ಟು ಬಾರಿ ಬೇಟಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಆದರೂ ಸಹ ವಾದಿಗೆ ನಾವು ಕ್ರಯ ಪತ್ರವನ್ನು ಮಾಡಿಕೊಡಲು ಆಸ್ತಿಯನ್ನು ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಸಲ್ಲಿಸುವ ಕಾಲಕ್ಕೆ ದಾವಾ ಅಸ್ತಿ ಖಾಲಿ ಸೈಟ ಇತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು 2016-17 ನೇ ಸಾಲಿನಲ್ಲಿ ಮಾರಾಟ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಖರೀದಿದಾರರು ಕ್ರಯಕ್ಕೆ ಪಡೆದ ನಂತರ ಅದೇ ವರ್ಷದಲ್ಲಿ ಕಟ್ಟಡ ಕಟ್ಟಲು ಪ್ರಾರಂಭಿಸಿರುತ್ತಾರೆ.

ಪ್ರತಿವಾದಿ 5 ಮತ್ತು 6 ರವರು ಈ ದಾವೆಯಲ್ಲಿ ಏನು ತಕರಾರು ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ವಾದಿ ದಾವಾ ಆಸ್ತಿಗೆ ಸಂಬಂದಿಸಿದಂತೆ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2019 ರ ಮಾರ್ಚ ತಿಂಗಳಲ್ಲಿ ಪ್ರತಿವಾದಿ 5 ಮತ್ತು 6 ರವರು ವಾದಿಯ ಸಿಮೆಂಟ್ ಶೀಟಗಳನ್ನು ಕೆಡವಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಅಲ್ಲಿ ಏನು ಇರಲಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ 5 ಮತ್ತು 6 ಹಾಗೂ ವಾದಿಯ ನಡುವೆ

ಗಲಾಟೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಹಾಗೂ ಉಳಿದ ಪ್ರತಿವಾದಿಯರು ಸೇರಿ ವಾದಿಗೆ ಮೋಸ ಮಾಡಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸೈಟ ನಂ. 11 ನನಗೆ ಬಂದಿದೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಸಲ್ಲಿಸಿಲ್ಲ ಎಂದರೆ ಸರಿ. ನಾನು ಹಾಗೂ ಅಣ್ಣ ತಮ್ಮಂದಿರು ಸೈಟುಗಳನ್ನು ಹಂಚಿಕೊಂಡಿದ್ದೇವೆ. ಈ ಬಗ್ಗೆ ದಾಖಲೆಯನ್ನು ನಾವು ಮಾಡಿಕೊಂಡಿಲ್ಲ. ಸಾಕ್ಷಿಯು ನಾನು ಪಂಚಾಯ್ತಿಗೆ ಕಂದಾಯ ಕಟ್ಟಿದ ರಶೀದಿಗಳು ಇವೆ ಎಂದು ನುಡಿಯುತ್ತಾರೆ. ವಾದಿಯ ಆಸ್ತಿಯನ್ನು ಕಬಳಿಸಬೇಕೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ .**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ಹರಿಹರ